ಸಂಸ್ಕೃತಿ ಭವನಗಳು

71 (250) ಶ್ರೀ ರಹೀಂ ಖಾನ್ (ಬೀದರ್) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೀದರ್ ಜಿಲ್ಲೆಯ ಗಡಿನಾಡು ಪ್ರದೇಶದ ಆಂಧ್ರ ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿ ಕನ್ನಡ ಭವನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಕನ್ನಡ ಭವನ ಮತ್ತು ಕನ್ನಡ ಸಾಹಿತ್ಯ ಪರಿಷತ್‌ನ ಕಟ್ಟಡವು ಮಂಜೂರು ಮಾಡಲು ಹಲವಾರು ಮನವಿ ಸಲ್ಲಿಸಿದ್ದಾಗ್ಯೂ ಅದರ ಬಗ್ಗೆ ಅಧಿಕಾರಿಗಳಾಗಲಿ, ಸರ್ಕಾರವಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣಗಳೇನು?

(ಇ) 2012ರಲ್ಲಿ ಬೀದರ್ ಜಿಲ್ಲೆಯ ಉತ್ತರ ಮತಕ್ಷೇತ್ರಕ್ಕೆ ಕನ್ನಡ ಭವನ ಮತ್ತು ಕನ್ನಡ ಸಾಹಿತ್ಯ ಪರಿಷತ್ ಭವನ ನಿರ್ಮಾಣ ಮಾಡಿ ಗಡಿನಾಡು ಪ್ರದೇಶಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

(ಈ) ಹಾಗಾದಲ್ಲಿ ಯಾವ ಸ್ಥಳದಲ್ಲಿ? ಎಂದು ನಿರ್ಮಾಣ ಕಾಮಗಾರಿ ಪ್ರಾರಂಭ ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

(ಅ) ಇಲ್ಲ

(ಆ) 1. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2010–11ನೇ ಸಾಲಿನಲ್ಲಿ ಈಗಾಗಲೇ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದಲ್ಲಿ ಮತ್ತು ಬೀದರ್ ನಗರದಲ್ಲಿ ಕನ್ನಡ ಭವನ ಕಟ್ಟಡ ನಿರ್ಮಾಣ ಮಾಡುವ ಸಲುವಾಗಿ ಕ್ರಮವಾಗಿ ರೂ. 10.00 ಲಕ್ಷ ಮತ್ತು ರೂ. 15.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

2. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಔರಾದ್ ತಾಲ್ಲೂಕಿನ ಸಂತಪೂರ ಗ್ರಾಮದಲ್ಲಿ ರೂ. 30.00 ಲಕ್ಷ ವೆಚ್ಚದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ ಮಾಡಲಾಗುತ್ತಿದೆ.

(ಇ) ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

(ಈ) ಉದ್ಭವಿಸುವುದಿಲ್ಲ.

ಶ್ರೀ ರಹೀಂಖಾನ್: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕನ್ನಡ ಭವನದ ಸಲುವಾಗಿ ಎಷ್ಟು ಸಲ ಅರ್ಜಿ ಕೊಟ್ಟರೂ ಅದರ ಮೇಲೆ Government ನಿಂದ ಏನು action ಆಗಿಲ್ಲ ಮತ್ತೆ ಬೇರೆ department ನಿಂದ ಅದರ ಬಗ್ಗೆ ಏನೂ ಮಾಹಿತಿ ಕೊಟ್ಟಿಲ್ಲ. ಏಕೆಂದರೆ ನಮ್ಮ ಕ್ಷೇತ್ರ ಆಂಧ್ರ ಮತ್ತು ಮಹಾರಾಷ್ಟ್ರ border ನಲ್ಲಿದೆ. ಅಲ್ಲಿ ಕನ್ನಡ ಕಲೆಗೆ Importence ಇದೆ. ಅದರ ಸಲುವಾಗಿ ಇದರ ಬಗ್ಗೆ minister ರವರು ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ, ಮಾನ್ಯ ಅಧ್ಯಕ್ಷರೆ, ಪ್ರತಿ ಕ್ಷೇತ್ರದಲ್ಲೂ ಕನ್ನಡ ಭವನ ಕಟ್ಟಲಿಕ್ಕೆ ಸಾಧ್ಯವಿಲ್ಲ. ಅವರದು ಗಡಿ ಪ್ರದೇಶವಾದ್ದರಿಂದ ಈಗಾಗಲೇ ಔರಾದ್ ತಾಲ್ಲೂಕಿನಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಒಂದು ಸಾಂಸ್ಕೃತಿಕ ಭವನವನ್ನು ಕಟ್ಟುತ್ತಿದ್ದೇವೆ. ಮುಂದಿನ ವರ್ಷದಲ್ಲಿ ಅನುದಾನದ ಲಭ್ಯತೆಯ ಆಧಾರ ನೋಡಿಕೊಂಡು ಅವರ ಕ್ಷೇತದಲ್ಲಿಯೂ ಕನ್ನಡ ಭವನ ಕಟ್ಟಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನಗೂ ಕೂಡಾ ಕೊಟ್ಟಿದ್ದಾರೆ. ಸಾಂಸ್ಕೃತಿಕ ಭವನ ಕಟ್ಟುತ್ತೇವೆ ಎಂದು ಪತ್ರ ಬರೆದು, 30 ಲಕ್ಷ ಬಿಡುಗಡೆ ಮಾಡಿರುವುದಾಗಿ ಆದೇಶವೂ ಬಂತು. ಆದರೆ 1 ವರ್ಷವಾದರೂ ಆಗದಿದ್ದಾಗ ನಿಮ್ಮ ಆಫೀಸಿನಲ್ಲಿ ಹೋಗಿ ಕೇಳಿದೆ. ನೀವು ದುಡ್ಡು ಬಿಡುಗಡೆ ಮಾಡಬಾರದೆಂಬ ಆದೇಶವನ್ನು ನೀಡಿದ್ದೀರಿ. ದಯಮಾಡಿ ಇದು ಕಾರ್ಯ ಆಗಿದ್ರೆ ಅವರೂ ಕೇಳುತ್ತಿರಲಿಲ್ಲ. ನಾನೂ ಕೇಳುತ್ತಿರಲಿಲ್ಲ. ಇದು ಒಳ್ಳೆಯ ಕೆಲಸ. ನನ್ನ ಕ್ಷೇತ್ರವೂ ಕೂಡ ಆಂಧ್ರದ ಗಡಿಯಲ್ಲಿ ಬರುತ್ತದೆ, ಆದರೆ ದುಡ್ಡು ಕೊಡಬೇಡಿ ಎಂಬ ಆದೇಶವೂ ಆಗಿದೆ. ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ದುಡ್ಡು ಕೊಡಬಾರದೆಂದು ಯಾವುದೇ ಆದೇಶ ಮಾಡಿಲ್ಲ. ಯಾಕೆಂದರೆ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಈ ವರ್ಷ 10 ಕೋಟಿ. ರೂ. ಹಣ ಬಿಡುಗಡೆ ಮಾಡಿದ್ದು, ಅವರ ಮೂಲಕ ಹಣ ಬಿಡುಗಡೆಯಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಅವರೇ ಲೆಟರ್ ಕೊಟ್ಟಿರುವುದು ಬೇಡ ಅಂತ.

ಶ್ರೀ ಗೋವಿಂದ ಎಂ. ಕಾರಜೋಳ : ಬೇಕಾದರೆ ನಾನು ಅವರಿಗೆ ಹೇಳುತ್ತೇನೆ.